ಆದರೆ, ಇಲ್ಲಿ ಒಂದು ಮಾತು ಹೇಳಲೇಬೇಕು. ನಾನು ಬರೆಯುವ ಕೃತಿಗಳಲ್ಲಿ ಎರಡು ವಿಧ. ಒಂದು ಸೃಜನಶೀಲ ಕೃತಿಗಳು ಮತ್ತೊಂದು ವಿಮರ್ಶಾತ್ಮಕ ಕೃತಿಗಳು. ನನ್ನ ಸೃಜನಶೀಲ ಕೃತಿಗಳನ್ನು ನಾನು ಬರೆಯುವ ಬಗೆ ಬೇರೆ. ವಿಮರ್ಶಾತ್ಮಕ ಕೃತಿಗಳು ಮತ್ತು ಲೇಖನಗಳನ್ನು ಬರೆಯುವಾಗ ಆ ಕೃತಿಗಳನ್ನು ಅಭ್ಯಾಸಮಾಡಿ, ವಿಮರ್ಶಿಸಿ, ನೋಟ್ಸ್ ಮಾಡಿಕೊಂಡು, ಬರೆದನಂತರ ಮತ್ತೊಮ್ಮೆ ಓದಿ, ತಿದ್ದಬೇಕಾದಲ್ಲಿ ತಿದ್ದಿ ಕೊನೆಗೆ ಹಸ್ತಪ್ರತಿಯನ್ನು ಸಿದ್ಧಮಾಡಿ ಪ್ರಕಟಣೆಗೆ ಕಳಿಸುತ್ತೇನೆ. ಇದು ಕೃತಿಯ ಕಡೆಗೆ ನಾನು ತೋರಿಸಲೇ ಬೇಕಾದ ಬದ್ಧತೆ. ಇದು ಒಂದು ಪ್ರಜ್ಞಾಪೂರ್ವಕವಾಗಿ ನಡೆಯುವ ಸಿದ್ಧತೆ ಮತ್ತು ಪ್ರಕ್ರಿಯೆ.

◆ **ನೀವು ಕಾವ್ಯ, ಗದ್ಯ, ಕಾದಂಬರಿ, ಸಣ್ಣಕಥೆ ಮತ್ತು ವಿಮರ್ಶೆ ಹೀಗೆ ಸಾಕಷ್ಟು ಸಾಹಿತ್ಯ ಪ್ರಕಾರಗಳಲ್ಲಿ ನಿಮ್ಮ ಛಾಪನ್ನು ಮೂಡಿಸಿದ್ದೀರಿ. ನಿಮಗೆ ವೈಯಕ್ತಿಕವಾಗಿ ಅತ್ಯಂತ ಖುಷಿ ಕೊಡುವ ಪ್ರಕಾರ ಯಾವುದು? ಅಥವಾ ಈ ಪ್ರಶ್ನೆಯೇ ಅಸಂಬದ್ಧ ಅನ್ನಿಸುತ್ತಾ?**

ಹಾಗೇನೂ ಇಲ್ಲ. ಕಾದಂಬರಿ, ಕವನ, ಗದ್ಯ, ಕತೆ ಇವೆಲ್ಲವಕ್ಕೂ ವ್ಯತ್ಯಾಸ ತಿಳಿಯುವ ಮುನ್ನವೇ ಬರೆಯಲು ಪ್ರಾರಂಭಿಸಿದವಳು ನಾನು. ನಾನು ಬಹಳ ಒಳ್ಳೆಯ ಕವಿತೆಗಳನ್ನು ಬರೆದೆ ಎಂದು ಹೇಳಿಕೊಳ್ಳಲಾರೆ. 'ಕಾವ್ಯ ಕೂಸು' ಇಂದ ಶುರುವಾಗಿ 'ಗಂಗೋತ್ರಿಯಲ್ಲಿ', 'ಬಿಳಿಲುಗಳು' ಎಲ್ಲವೂ ಕೇವಲ ತಕ್ಕಮಟ್ಟಿಗೆ ಮಾತ್ರ ಇವೆ. ಅವು ನನಗೆ ಎಂದೂ ಸಮಾಧಾನ ಕೊಟ್ಟಿಲ್ಲ.

ಕಾವ್ಯ ನನ್ನ ಮಾಧ್ಯಮ ಅಲ್ಲ ಅಂತ ಅನಿಸಲು ಶುರುವಾಗಿದ್ದು ನಾನು ಎಂ.ಎ. ತರಗತಿಗೆ ಸೇರಿ ನನ್ನ ಓದು ವಿಸ್ತಾರವಾಗತೊಡಗಿದಾಗ. ಹಾಗೆ ನನ್ನ ಪ್ರಪಂಚ ದೊಡ್ಡದಾಗುತ್ತಾ ಹೋದಂತೆ ಉತ್ತಮ ಸಾಹಿತ್ಯವನ್ನು ಓದಲು ಅವಕಾಶ ಸಿಕ್ಕ ಸಂದರ್ಭದಲ್ಲಿ ನಾನು ಬರೆದ ಕವಿತೆಗಳು ಜಾಳಾಗಿರಬಹುದು ಎಂಬ ಅನುಮಾನ ಬರಲು ಶುರುವಾಯಿತು. ನನಗೆ ಚೆನ್ನಾಗಿ ಒದಗಿಬಂದಿದ್ದು ಕತೆಗಳ ಮಾಧ್ಯಮ, ಹಾಗಾಗಿ ಅದರಲ್ಲೇ ಹೆಚ್ಚು ಮುಂದುವರೆದೆ.

◆ **ಕತೆಗಳ ಸೃಷ್ಟಿಯ ಕಡೆಗೆ ನೀವು ಆಕರ್ಷಿತರಾದದ್ದು ಹೇಗೆ?**

ಈ ಪ್ರಶ್ನೆಗೆ ಸರಳವಾಗಿ ಉತ್ತರ ಹೇಳಬೇಕೆಂದರೆ ಕಾವ್ಯದಲ್ಲಿ ಬಹಳ ಬಿಗಿ ಬೇಕಿತ್ತು. ಇಷ್ಟೇ ಪದಗಳಲ್ಲಿ ಅಷ್ಟೊಂದು ಹೇಳಬೇಕು. ಪ್ರತಿಮೆ, ಹೊಸತನ ಏನೆಲ್ಲಾ ಮಾಡಿಯೂ ಅದು ಓದುವ ಮನಸ್ಸಿಗೆ ಮುಟ್ಟದೆ ಹೋಗಬಹುದು ಎನಿಸುತ್ತಿತ್ತು. ಆದರೆ, ಕತೆ ಹಾಗಲ್ಲ. ಬೇಕಾದಷ್ಟು ಪದಗಳನ್ನು ಉಪಯೋಗಿಸಲು, ಹೊಸ ಪ್ರತಿಮೆಗಳನ್ನು ಕಟ್ಟಲು ಅವುಗಳ ಚೌಕಟ್ಟನ್ನು ವಿವರಿಸಲು ನಿರ್ಬಂಧಗಳು ಇರಲಿಲ್ಲ. ಇದು ಒಂದು ಬಗೆಯಲ್ಲಿ ಸೀಮಿತ ಮಾದರಿಯ ಫ್ರೀ ಹ್ಯಾಂಡ್ ಅನ್ನಬಹುದು. ಇದು ನನಗೆ ಇಷ್ಟ ಆಯ್ತು. ಹಾಗಾಗಿ ಇದರಲ್ಲೇ ನನ್ನ ಸಾಹಿತ್ಯ ಕೃಷಿ ಹೆಚ್ಚು ಮುಂದುವರೆಸಿದೆ. ಸಣ್ಣಕತೆಗಳಲ್ಲಿ ನನಗೆ ಹೇಳಬೇಕು ಎಂದು ಅನಿಸಿದ್ದೆಲ್ಲವನ್ನು ಸಾಧ್ಯಂತವಾಗಿ ಅನಗತ್ಯ ಲಂಬಿಸದೆ ಚೊಕ್ಕವಾಗಿ ಹೇಳಬಹುದಾಗಿತ್ತು.

ಗ್ರಾಮೀಣ ಹಾಗೂ ನಗರಕೇಂದ್ರಿತ ಅನುಭವ ಎರಡನ್ನು ಬಹಳ ಹತ್ತಿರದಿಂದ ಪಡೆದುಕೊಂಡಂಥವಳು ನಾನು. ಅಪ್ಪ ನಗರದ ಸಂಕೇತವಾಗಿದ್ದರೆ ಅಮ್ಮ ಗ್ರಾಮ ಜೀವನದ ಸಂಕೇತವಾಗಿದ್ದರು. ಹಾಗಾಗಿ ಎರಡೂ ಪರಿಸರದ ಭಾಷೆಗಳು ನನ್ನವೇ.

ಇದನ್ನು ಹೇಳಬೇಕು ಎನ್ನುವಾಗ ನನಗೆ ಕಾವ್ಯದ ಪರಿಭಾಷೆ ಸಾಲದೆ ಬರುತ್ತಿತ್ತು. ಇದು ನನ್ನ ವೈಯಕ್ತಿಕ ಮಿತಿಯೇ ಇರಬಹುದು, ಆದರೆ ಹೀಗೆ ಅನ್ನಿಸಿದ್ದಂತೂ ಸತ್ಯ. ಹಾಗೆ ನೋಡಿದರೆ ಕಾವ್ಯ ಬಹಳ ವ್ಯಕ್ತಿಗತವಾದ ಅನುಭವ ಕೊಡುವ ಒಂದು ಮಾದರಿ. ಇದು ಅದರ ಹೆಗ್ಗಳಿಕೆಯೂ ಹೌದು